ಇನ್ನು ಒಂದೆರಡು ವರ್ಷಗಳಲ್ಲಿ ನಿವ್ವಳ ಲಾಭ ಮಾಡತಕ್ಕಂಥ ಸ್ಥಿತಿಗೆ ಬರುತ್ತದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಮಂತ್ರಿಗಳು ಹೇಳಿರುವ ಉತ್ತರದಲ್ಲಿ ವರ್ಷಕ್ಕೆ ಸುಮಾರು ೨೬೮ ಲಕ್ಷ ಸ್ಯಾಲರಿ ಮತ್ತು ಇತರೆ ಖರ್ಚು ಇದೆ. ಇದಲ್ಲದೆ ಇಂಟರೆಸ್ಟ್ ಕೊಡಬೇಕಾದ್ದು ಎಷ್ಟು ಎನ್ನುವುದನ್ನು ಹೇಳಬೇಕು. ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜಂಟ್ ಕಾರ್ಖಾನೆಗೆ ವಿಸಿಟ್ ಕೊಟ್ಟಿಂಥ ಸಂದರ್ಭದಲ್ಲಿ ನನಗೆ ಗೊತ್ತಾಗದಂತೆ ಇಷ್ಟೊಂದು ದಾಸ್ತಾನು ಇರುವುದಕ್ಕೆ ಕಾರಣ ಎಂ.ಎಸ್.ಐ ಎಲ್ ನವರು ಮಾರುತ್ತಾ ಇಲ್ಲ, ಎಂದು, ಅದು ಒಂದೇ ಕಾರಣ. ಈಗಾಗಲೇ ಆ ಇಂಡಸ್ಟ್ರಿಯಲ್ಲಿರಂಥ ಮ್ಯಾನೇಜ್‌ಮೆಂಟ್‌ನವರು ರಿಕ್ವೆಸ್ಟ್ ಮಾಡಿದ್ದಾರೆ. ಮಾರಾಟವನ್ನು ಕಂಪ್ಲೀಟ್ ನವರಿಗೇ ಬಿಟ್ಟುಬಿಟ್ಟರೆ ಸಾಕಷ್ಟು ಲಾಭ ಮಾಡಬಹುದು ಎಂದು. ಮಾರಾಟವನ್ನು ಪೂರ್ತಿಯಾಗಿ ಸರ್ಕಾರದವರು ಅವರಿಗೇ ಏಕೆ ಬಿಟ್ಟುಕೊಡಬಾರದು. ಸೋಪ್ಸ್‌ಗೆ ಸಾಕಷ್ಟು ಡಿಮ್ಯಾಂಡ್ ಇದೆ, ವಿದೇಶಗಳಲ್ಲೂ ಡಿಮ್ಯಾಂಡ್ ಇದೆ ಎನ್ನುವುದು ಗೊತ್ತಿದೆ. ಸರ್ಕಾರ ಇದರಲ್ಲಿ ಏಕೆ ಹಿಂದೇಟು ಹಾಕುತ್ತಿದೆಯೋ ಗೊತ್ತಿಲ್ಲ, ಇದಕ್ಕೆ ಏನು ಕಾರಣ ಎನ್ನುವುದನ್ನು ತಿಳಿಸಬೇಕು.

ಶ್ರೀ ಜೆ. ಹೆಚ್. ಪಟೇಲ್.—ಯಾವ ಹಿಂದೇಟೂ ಹಾಕಿಲ್ಲ. ಈಗಾಗಲೇ ೨ ಸಾರಿದ ಕೆಳಗೆ ಸರ್ಕಾರ ತೀರ್ಮಾನ ಮಾಡಿದೆ. ಸೋಪ್ಸ್ ಅಂಡ್ ಡಿಟರ್ಜಂಟ್‌ನವರು ಅವರು ಉತ್ಪಾದನೆ ಮಾಡತಕ್ಕಂಥ ವಸ್ತುಗಳನ್ನು ಭಾರತದಲ್ಲೆಲ್ಲಾ ಅವರೇ ಮಾರಾಟ ಮಾಡಿಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವರಿಗೆ ವಿದೇಶಗಳಲ್ಲಿ ಯಾವುದೇ ವ್ಯವಸ್ಥೆ ಇಲ್ಲದಕಾರಣ ವಿದೇಶೀ ವ್ಯವಹಾರವನ್ನು ಮಾತ್ರ ಎಂ.ಎಸ್.ಐ.ಎಲ್.ನವರು ಮಾಡುತ್ತಾರೆ. ಉಳಿದಿದ್ದನ್ನು ಕೆ.ಎಸ್. ಅಂಡ್ ಡಿ.ಎಲ್.ಗೆ ಕೊಟ್ಟಿದೆ. ಆದುದರಿಂದ ಮಾನ್ಯ ಸದಸ್ಯರ ಕಳಕಳಿ ಏನೂ ಬೇಡ. ಈಗಾಗಲೇ ಈ ಒಂದು ವ್ಯವಸ್ಥೆಯನ್ನು ಕೆ.ಎಸ್. ಅಂಡ್ ಡಿ.ಎಲ್.ಗೆ ಕೊಟ್ಟಿದೆ. ಆಮೇಲೆ ಅದು ಒಂದೇ ಕಾರಣ ಅಲ್ಲ. ಈಗ ಫುಲ್ ಕೆಪಾಸಿಟಿಯಲ್ಲಿ ರನ್ ಮಾಡದೇ ಹೋದರೆ ಪ್ರತಿಯೊಂದು ಸೋಪಿನ ಬೆಲೆ ಜಾಸ್ತಿಯಾಗುತ್ತದೆ. ಆದಕ್ಕೋಸ್ಕರ ಮ್ಯಾನೇಜ್‌ಮೆಂಟ್‌ನವರು ಬಹಳ ತೀಪ್ರವಾಗಿ ಟೋಟಲ್ ಕೆಪಾಸಿಟಿ ಉತ್ಪಾದನೆ ಮಾಡುವುದಕ್ಕೆ ಯೋಚನೆ ಮಾಡುತ್ತಾ ಇದ್ದಾರೆ. ಈಗ ೧೨ ಕೋಟಿ ಬೆಲೆ ಬಾಳತಕ್ಕ ವಸ್ತುಗಳು ಸ್ಟಾಕ್ ಇದೆ ಅಂದರೆ ಇದನ್ನು ಮೊದಲು ಆದಷ್ಟು ಬೇಗ ಕ್ಲಿಯರ್ ಮಾಡಬೇಕು. ಅನಂತರ ಉತ್ಪಾದನೆ ಮತ್ತು ಮಾರಾಟ ಇವೆರಡನ್ನೂ ಬ್ಯಾಲೆನ್ಸ್ ಮಾಡಬೇಕು.

ಶ್ರೀ ಎಂ. ವೀರಯ್ಯಸ್ವಾಮಿ.—ಪೂರ್ತಿ ಕೆಪಾಸಿಟಿ ಉತ್ಪಾದನೆ ಮಾಡಿಕೊಳ್ಳುವುದಕ್ಕೆ ಎಷ್ಟು ದಿವಸ ಆಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಮೊದಲು ಬಹಳ ಕಡಿಮೆ ಇತ್ತು. ಬರೀ ೬ ಸಾವಿರ ಟನ್ ಸೋಪ್ ಉತ್ಪಾದನೆ ಮಾಡುತ್ತಿದ್ದರು. ಈಗ ಹನ್ನೆರಡೂವರೆ–ಹದಿಮೂರು ಸಾವಿರ ಟನ್‌ಗೆ ಬಂದಿದ್ದಾರೆ. ಉತ್ಪಾದನೆ ಮಾಡುವುದು ಒಂದೇ ಅಲ್ಲ, ಮಾರ್ಕೆಟಿಂಗ್ ಸ್ಟ್ಯಾಂಡರ್ಡನ್ನೂ ಉಳಿಸಿಕೊಂಡು ಹೋಗಬೇಕು. ಅದಕ್ಕೆ ಪ್ರತಿವರ್ಷ ೧೫–೨೦ ಪರ್ಸೆಂಟ್ ಇಂಪ್ರೂವ್‌ಮೆಂಟ್‌ಗೆ ಮಾಡಬೇಕಾಗಿದೆ. ೪-೫ ವರ್ಷಗಳಲ್ಲಿ ಫುಲ್ ಕೆಪಾಸಿಟಿಯಲ್ಲಿ ರನ್ ಮಾಡುವುದಕ್ಕೆ ಬರಬೇಕು.

ಸಣ್ಣ ಹಿಡುವಳಿದಾರರಿಗೆ ವಿದ್ಯುತ್ ಸರಬರಾಜು

೨೨೬೦. ಶ್ರೀ ರವೀಂದ್ರನಾಥ ಬಾಬು (ಕೊಟ್ಟೂರು):—ಮಾನ್ಯ ವಿದ್ಯುತ್ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆ ದಯವಿಟ್ಟು ಉತ್ತರಿಸುವರೇ ?

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಒಂದು ಎಕರೆಗೆ ಒಂದು ಹೆಚ್‌ಪಿ ಯಂತೆ ಕನಿಷ್ಠ ೫ ಎಕರೆಗಳ ಮೇಲ್ಪಟ್ಟ ಜಮೀನಿಗೆ ವಿದ್ಯುತ್ ಸರಬರಾಜು ಮಾಡಲು ನಿರ್ಣಯ ತೆಗೆದುಕೊಂಡಿರುವುದು ನಿಜವೆ ?

ಆ) ಈ ನಿರ್ಣಯದಿಂದ ೫ ಎಕರೆಗಳಿಗಿಂತ ಕಡಿಮೆ ಜಮೀನಿರುವ ರೈತನಿಗೆ ತೊಂದರೆ ಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ ?

ಇ) ಐದು ಎಕರೆಗಳಿಗಿಂತ ಕಡಿಮೆ ಜಮೀನಿರುವ ರೈತರಿಗೆ ಸಹಾಯ ಮಾಡುವ ದೃಷ್ಟಿಯಿಂದ ಸರ್ಕಾರವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿರ್ಣಯವನ್ನು ಪರಿಷ್ಕರಿಸಲು ನಿರ್ದೇಶನ ನೀಡುವುದೇ ?

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಮಂತ್ರಿಗಳು).—

ಅ) ಇಲ್ಲ.

ಆ) ಮತ್ತು ಇ) ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಕೆ. ವಿ. ರವೀಂದ್ರನಾಥ ಬಾಬು.—ಮಾನ್ಯ ಮಂತ್ರಿಗಳು 'ಇಲ್ಲ, ಉದ್ಭವಿಸುವುದಿಲ್ಲ.' ಎಂದು ಉತ್ತರ ಕೊಟ್ಟಿದ್ದಾರೆ. ಕೂಡ್ಲಿಗಿ ತಾಲ್ಲೂಕಿನಲ್ಲಿ ಸ್ಮಾಲ್ ಫಾರ್ಮರ್ಸ್‌ಗೆ ಪವರ್ ಕನೆಕ್ಷನ್ ಕೊಡದೆ ಪೆಂಡಿಂಗ್ ಇದೆ. ಕಾರಣವೇನೆಂದರೆ ಕ್ಲಾರಿಫಿಕೇಷನ್‌ಗೆ ಬಂದಿದೆ. ೩-೪ ತಿಂಗಳಿಂದ ಇದು ಪೆಂಡಿಂಗ್ ಇದೆ. ಆದುದರಿಂದ ಆದಷ್ಟು ಬೇಗ ಕ್ಲಾರಿಫಿಕೇಷನ್‌ನನ್ನು ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗೆ ಕಳಿಸಿಕೊಟ್ಟರೆ ಪವರ್ ಕನೆಕ್ಷನ್ ಕೊಡಬಹುದು, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

ಶ್ರೀ ಎ. ಲಕ್ಷ್ಮೀನರಸಿಂಹಯ್ಯ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ದೊಡ್ಡ ರೈತರು ಸಣ್ಣ ರೈತರ ಪ್ರಶ್ನೆಯಿಲ್ಲ. ಎಕರೆವಾರು ಜಮೀನಿಗೂ ಹಾರ್ಸ್ ಪವರಿಗೂ ಸಂಬಂಧವಿಲ್ಲ. ಆ ರೀತಿ ನಿರ್ದೇಶನವನ್ನು ಕೂಡ ನಾವು ಕೊಟ್ಟಿಲ್ಲ. ಇದನ್ನು ಏತಕ್ಕೆ ತಡೆಹಿಡಿದಿದ್ದಾರೆ ಎನ್ನುವುದಕ್ಕೆ ಕಾರಣ ಗೊತ್ತಿಲ್ಲ. ಬಹುಶಃ ತಪ್ಪು ತಿಳುವಳಿಕೆಯಿಂದ ತಡೆಹಿಡಿದಿದ್ದರೆ, ಸೂಕ್ತ ತಿಳುವಳಿಕೆ ಕೊಟ್ಟು ತಕ್ಷಣ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಹೊಸದುರ್ಗ ತಾಲ್ಲೂಕಿನಲ್ಲಿ ಶ್ರೀಗಂಧದ ಮರಗಳ ಕಳ್ಳ ಸಾಗಾಣಿಕೆ ಪ್ರಕರಣಗಳು

೧೩೭೦. ಶ್ರೀ ಜಿ. ರಾಮದಾಸ್ (ಹೊಸದುರ್ಗ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಅಕ್ರಮವಾಗಿ ಸಾಗಿಸುತ್ತಿದ್ದ ಶ್ರೀ ಗಂಧದ ಮರವನ್ನು ವಶಪಡಿಸಿಕೊಂಡಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಆ) ಹಾಗಿದ್ದಲ್ಲಿ ಹೊಸದುರ್ಗ ತಾಲ್ಲೂಕಿನಲ್ಲಿ ಅಕ್ರಮವಾಗಿ ಶ್ರೀ ಗಂಧವನ್ನು ಕಳ್ಳಸಾಗಾಣಿಕೆ ಮಾಡುತ್ತಿದ್ದ ಪ್ರಕರಣಗಳೆಷ್ಟು ?

ಇ) ಸರ್ಕಾರವು ಈ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಹಾಗೂ ದೊರೆತ ಶ್ರೀಗಂಧದ ಪ್ರಮಾಣವೆಷ್ಟು ? ಹಾಗೂ ಇದರ ಮೌಲ್ಯವೆಷ್ಟು ?

ಈ) ಇತ್ತೀಚೆಗೆ ಹೊಸದುರ್ಗ ತಾಲ್ಲೂಕಿನ ಮಾಡದ ಕೆರೆ ಹೋಬಳಿ, ಡಿ. ಮಲ್ಲಾಪುರ ಗ್ರಾಮದಲ್ಲಿ ಗ್ರಾಮದ ಜನರಿಂದ ಪತ್ತೆಯಾದ ಅಕ್ರಮ ಶ್ರೀಗಂಧದ ಸಾಗಾಣಿ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮ ಏನು ? ಹಾಗೂ ಅಲ್ಲಿ ದೊರೆತ ಶ್ರೀ ಗಂಧದ ಪ್ರಮಾಣವೆಷ್ಟು ? ಮತ್ತು, ಅದರ ಮೌಲ್ಯವೆಷ್ಟು ?

ಶ್ರೀ ಜಿ. ಎಸ್. ಬಾಗಲಕೋಟ್ (ಅರಣ್ಯ ರಾಜ್ಯ ಮಂತ್ರಿಗಳು).—

	ವರ್ಷ	ಪ್ರಕರಣಗಳು
ಅ)	೧೯೮೬-೮೭	೫
	೧೯೮೭-೮೮	೬
ಆ)	೧೯೮೬-೮೭	೧
	೧೯೮೭-೮೮	೩